**ಓ.ಎಸ್. ನಂಃ 432/2025**

**ಪಿ.ಡಬ್ಲ್ಯೂಃ 1**

**ದಿನಾಂಕ 09.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ ಜೆ.ಜಿ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿಃ 20.04.2023 ರ ಆನ್ ಡಿಮಾಂಡ್ ಪ್ರೊನೋಟ್ ನ್ನು ನಿಪಿ.1 ಎಂದು, ದಿಃ 18.04.2024 ರ ಕಾನೂನು ತಿಳುವಳಿಕೆ ನೋಟಿಸನ್ನು ನಿಪಿ.2 ಎಂದು, ಅಂಚೆ ರಸೀದಿಗಳನ್ನು ನಿಪಿ.3 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**